11) ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ :– ರಾಯಚೂರು ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮೆ॥ ಪಿಹೆಚ್ಐ ಸೀಡ್ಸ್ ಲಿಮಿಟೆಡ್ ಅವರು ಸರಬರಾಜು ಮಾಡಿರುವ ಭತ್ತದ ಬಿತ್ತನೆ ಬೀಜದಿಂದ ರೈತರಿಗೆ ನಷ್ಟ ಉಂಟಾಗಿರುವ ಬಗ್ಗೆ.

ಶ್ರೀ ಎನ್. ಎಸ್. ಬೋಸರಾಜು (ಮಾನ್ವಿ) :– ಮಾನ್ಯ ಅಧ್ಯಕ್ಷರೆ, ರಾಯಚೂರು ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮೆ॥ ಪಿಹೆಚ್ಐ ಸೀಡ್ಸ್ ಲಿಮಿಟೆಡ್‌ರವರು ಸರಬರಾಜು ಮಾಡಿರುವ ಭತ್ತದ ಬೀಜದಿಂದ ನಷ್ಟ ಉಂಟಾಗಿರತಕ್ಕಂಥದ್ದನ್ನು ಈಗಾಗಲೇ ಗಮನಿಸಲಾಗಿದೆ. ಕಳೆದ 20 ದಿವಸಗಳ ಹಿಂದೆ ರೈತರು ಈ ಬಗ್ಗೆ ನಮ್ಮ ಗಮನಕ್ಕೆ ತಂದಾಗ, ತಕ್ಷಣ ನಾವು ಆ ಬಗ್ಗೆ ಇಲಾಖೆಯ ಅಧಿಕಾರಿಗಳಿಗೂ ಮತ್ತು ಸಂಬಂಧಪಟ್ಟಂತಹ ಕೃಷಿ ಸಚಿವರ ಗಮನಕ್ಕೂ ಸಹ ತಂದೆವು. ಈಗಾಗಲೇ ಅವರು ನಿಗದಿ ಪಡಿಸಿರತಕ್ಕಂಥ ನೂರು ದಿವಸಗಳ ಕಾಲ ಮುಗಿದಿದೆ. ಒಂದು ಕೆ.ಜಿ.ಗೆ 900 ರೂ.ಗಳಂತೆ ಖರೀದಿಸಿದ certified seeds & bill, number ಸಹಿತ ಸರಬರಾಜು ಮಾಡಲಾಗಿದೆ. ಇಂತಹ ಸಂದರ್ಭದಲ್ಲಿ ಇವತ್ತು ನೂರು ದಿವಸಗಳ ಕಾಲ ಮುಗಿದಿದ್ದರೂ ಸಹಿತ ಇವತ್ತು ಅದನ್ನು ಕೊಂಡ ರೈತರಿಗೆ ಬೆಳೆ ಬಾರದಂತಹ ಪರಿಸ್ಥಿತಿ ಬಂದಿದೆ. ಈಗಾಗಲೇ ಎಕರೆಗೆ 10 ಸಾವಿರದಿಂದ 12 ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿರತಕ್ಕಂಥ ರೈತರಿಗೆ ಬಂದದ್ದು ಬಾಯಿಗೆ ಬರಲಾರದಂತಹ ರೀತಿಯಲ್ಲಿ ಆಗಿ, ಅನೇಕ ರೈತರು ಕಂಗಾಲಾಗಿ ಈಗಾಗಲೇ ಜನಪ್ರತಿನಿಧಿಗಳ ಹತ್ತಿರ ಮತ್ತು ಇಲಾಖೆಯ ಅಧಿಕಾರಿಗಳ ಹತ್ತಿರ ಸಾಕಷ್ಟು ವಿನಂತಿ ಮಾಡಿದ್ದಾರೆ. ಇವತ್ತು ಬಹಳ ಆತಂಕಕ್ಕೆ ಒಳಪಟ್ಟಿರತಕ್ಕಂಥ ವಿಷಯವನ್ನೂ ಸಹಿತ ನಾವು ಗಮನಿಸಬೇಕು. ಕಳೆದ ಹತ್ತು ದಿವಸಗಳಿಂದ ಸತತವಾಗಿ ನಾವು ಈ ವಿಷಯ ಪ್ರಸ್ತಾಪಕ್ಕಾಗಿ ನಾನು ಮತ್ತು ಇತರ ಸ್ನೇಹಿತರು ಸಾಕಷ್ಟು ಪ್ರಯತ್ನ ಮಾಡಿದೆವು. ಕಾರಣಾಂತರಗಳಿಂದ ಮುಂದುವರೆದು ಇವತ್ತು ತಮ್ಮ ಅಧ್ಯಕ್ಷತೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಸಿಕ್ಕಿದೆ. ಈ ವಿಷಯದಲ್ಲಿ ತಕ್ಷಣ ಸಚಿವರು ಅಲ್ಲಿ ಆಗಿರುವಂತಾದ್ದರ ಬಗ್ಗೆ ಸಿಕ್ಕಿರತಕ್ಕಂಥ ಮಾಹಿತಿ ಆಧರಿಸಿ ಜನರಿಗೆ ಇದರ ಬಗ್ಗೆ compensation ಸಿಗತಕ್ಕಂಥ ರೀತಿಯಲ್ಲಿ ಮಾಡಬೇಕು. officially Agriculture Department ಒಪ್ಪಿಸಿರತಕ್ಕಂಥ ದುಖಾನ್‌ಗಳ ಮೂಲಕ certified seeds ಅನ್ನು ಮಾರಾಟ ಮಾಡಲಾಗಿದೆ. ಆ ಬಗ್ಗೆ ರೈತರ ಹತ್ತಿರ receipt ಇದೆ, ಬ್ಯಾಚ್ ನಂ ಇದೆ, certified seeds ಎಂದು ಅದರಲ್ಲಿ ಹಾಕಿರತಕ್ಕಂಥ ಗುರುತು ಸಹಾ ಇದೆ. Official ಆಗಿ ಕೃಷಿ ಇಲಾಖೆಯ ಅನುಮೋದನೆ ಆಗಿರತಕ್ಕಂಥ ಈ ಬೀಜಗಳನ್ನು ಇವತ್ತು ಸರಬರಾಜು

ಮಾಡಿದ್ದಾರೆ. ಇವತ್ತು ಸಾವಿರಾರು ಎಕರೆ ಜಮೀನಿನಲ್ಲಿ ಬೆಳೆದಿದ್ದಾರೆ. ಕೇವಲ ರಾಯಚೂರು ಜಿಲ್ಲೆ ಮಾತ್ರವಲ್ಲ, ಮಾನ್ವಿ, ಚಿಂದನೂರು, ದೇವದುರ್ಗ, ಲಿಂಗಸಗೂರು ಅಲ್ಲದೆ ಇವತ್ತು ಕೊಪ್ಪಳ, ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಸಾವಿರಾರು ಎಕರೆಗಳಲ್ಲಿ ಬೆಳೆಯಲಾಗಿದೆ. ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ತಕ್ಷಣ ಅದಕ್ಕೆ compensation ಕೊಡಿಸುವುದಕ್ಕೆ ನಮ್ಮ ಸಚಿವರು ಪ್ರಯತ್ನ ಮಾಡಬೇಕು. ಈ ದಿಸೆಯಲ್ಲಿ ಈ ವಿಷಯವನ್ನು ನಾನು ನಮ್ಮ ಸಂಬಂಧಪಟ್ಟಂತಹ ಕೃಷಿ ಇಲಾಖೆಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :– ಮಾನ್ಯ ಅಧ್ಯಕ್ಷರೆ, ಈ ಕಂಪನಿಯ ಭತ್ತದ ಬೀಜಗಳನ್ನು ಹಾಕಲು ರೈತರು ಎಕರೆಗೆ ಸುಮಾರು 15 ರಿಂದ 20 ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ. 10–15 ಕೋಟಿ ರೂ.ಗಳಿಗೆ ಮೇಲ್ಪಟ್ಟು ಬಂಡವಾಳ ಹೂಡಲಾಗಿದೆ. ನನ್ನ ಮತ್ತು ಪಕ್ಕದ ಮಾನ್ವಿ ತಾಲ್ಲೂಕಿನಲ್ಲಿ ಮಾನ್ಯ ಬೋಸರಾಜ್‌ರವರ ಕ್ಷೇತ್ರದಲ್ಲಿ ರೈತರು ಭತ್ತ ಬೆಳೆದು, ಅದು ಕಟಾವಿಗೆ ಬಂದಿದೆ. ಇಂತಹ ಗಂಭೀರವಾದ ಪರಿಸ್ಥಿತಿ ಇರುವುದರಿಂದ ರೈತರು ವಿಷ ತೆಗೆದುಕೊಳ್ಳುವಂಥ ವಾತಾವರಣ ಅಲ್ಲಿ ನಿರ್ಮಾಣವಾಗಿದೆ. ಇವತ್ತು ಕೃಷಿ ಇಲಾಖೆಯ ಅನೇಕ ವಿಜ್ಞಾನಿಗಳು ಬಂದು, ಈಗಾಗಲೇ ಆ ಒಂದು ಭತ್ತದ ಬೆಳೆಯನ್ನು ಪರೀಕ್ಷಿಸಿ, ಸುಮಾರು 20–30 ಪರ್ಸೆಂಟ್ ಕಾಳು ಗಟ್ಟಿ ಇದೆ ಎನ್ನುವಂತಹ ರಿಪೋರ್ಟ್ ಅನ್ನೂ ಕೂಡ ಇವತ್ತು ವಿಜ್ಞಾನಿಗಳು ಕೊಟ್ಟಿದ್ದಾರೆ. ಇಷ್ಟೆಲ್ಲಾ ಸಮರ್ಪಕವಾಗಿ ನಡೆದಾಗ್ಯೂ ಕೂಡ ರಾಜ್ಯ ಸರ್ಕಾರಕ್ಕೆ ನಾವು ಒತ್ತಾಯ ಮಾಡುವುದು ಇಷ್ಟೇ, ಸುಮಾರು 15–20 ಸಾವಿರ ಎಕರೆಯಲ್ಲಿ ಸಾವಿರಾರು ರೂ.ಗಳನ್ನು ಖರ್ಚು ಮಾಡಿರತಕ್ಕಂಥ ರೈತರಿಗೆ ಪರಿಹಾರ ಕೊಡಿಸತಕ್ಕಂಥ ಕೆಲಸವಾಗಬೇಕು. ಆ ಕಳಪೆ ಬೀಜ ಕೊಟ್ಟಿರತಕ್ಕಂಥ ಕಂಪನಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕಂಥ ಕೆಲಸ ಆಗಬೇಕು. ಪ್ರತಿವರ್ಷವೂ ನಮ್ಮ ಭಾಗದಲ್ಲಿ ಈ ರೀತಿ ಆಗುತ್ತಲೇ ಇದೆ. ರೈತರು ಇದರಿಂದ ಕಷ್ಟಕ್ಕೆ ಸಿಲುಕುತ್ತಲೇ ಇದ್ದಾರೆ. ಆ ರೈತರಿಗೆ ಆಗಿರತಕ್ಕಂಥ ಅನ್ಯಾಯವನ್ನು ಬೇಗ ಸರಿಪಡಿಸತಕ್ಕಂಥ ಕೆಲಸ ರಾಜ್ಯ ಸರ್ಕಾರದಿಂದ ಆಗಬೇಕಾಗಿದೆ. ಇವತ್ತು ಉತ್ತರದಲ್ಲಿ ಅವರು 30–40 ದಿವಸ ಪರೀಕ್ಷೆ ಮಾಡುವುದಕ್ಕೆ ಬೇಕು ಎನ್ನುವಂತಹ ವಿಚಾರವನ್ನೂ ಕೂಡ ವ್ಯಕ್ತಪಡಿಸಿದ್ದಾರೆ. ಈಗಾಗಲೇ harvesting time ಇರುವುದರಿಂದ ಆ ಬೆಳೆ ಈಗ ಬಿಟ್ಟರೆ, ಪುನಃ ನಿಮಗೆ ಪರೀಕ್ಷೆ ಮಾಡುವುದಕ್ಕೆ ಬೆಳೆ ಸಿಗುವುದಿಲ್ಲ. ಇನ್ನೂ 4–5 ದಿವಸಗಳಲ್ಲಿ ಇದರ ಬಗ್ಗೆ ತೀರ್ಮಾನವನ್ನು ರಾಜ್ಯ ಸರ್ಕಾರ ಮಾಡಲೇಬೇಕಾಗುತ್ತದೆ. ಇಂತಹ ಗಂಭೀರ ಪರಿಸ್ಥಿತಿ ಇರುವುದರಿಂದ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇವೆ. ಆದಷ್ಟು ತೀವ್ರಗತಿಯಲ್ಲಿ ಅಂದರೆ 3–4 ದಿವಸಗಳಲ್ಲಿ ರಾಜ್ಯಮಟ್ಟದ ಹಿರಿಯ ಅಧಿಕಾರಿಗಳನ್ನು, ಡೈರೆಕ್ಟರ್ ಅನ್ನಾಗಲಿ ಅಥವಾ ಆಯುಕ್ತರನ್ನಾಗಲಿ ಕಳುಹಿಸಿ,

ಇದರ ಬಗ್ಗೆ ಪರಿಶೀಲಿಸಿ, ಆ ಕಂಪನಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದರ ಜೊತೆಗೆ, immediate ಆಗಿ ರೈತರಿಗೆ, ಏನು ಅವರು ಖರ್ಚು ಮಾಡಿದ್ದಾರೋ, ಅದಕ್ಕೆ ಪರಿಹಾರ ನೀಡತಕ್ಕಂಥ ಪ್ರಯತ್ನ ಆಗಬೇಕು ಎನ್ನುವಂತಹ ಒಂದು ಒತ್ತಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಂಶೆಪೂರ್ :– ಮಾನ್ಯ ಅಧ್ಯಕ್ಷರೆ, 2006–07 ರ ಹಿಂಗಾರು ಬೇಸಿಗೆ ಹಂಗಾಮಿನಲ್ಲಿ ಉತ್ತರ ಕರ್ನಾಟಕ ಕೆಳಕಂಡ ಜಿಲ್ಲೆಗಳಲ್ಲಿ ಬೆಳೆದ ಭತ್ತದ ಕ್ಷೇತ್ರದ ವಿವರಗಳು ಕೆಳಕಂಡಂತಿದೆ.

ಶ್ರೀ ಕೆ. ಶ್ರೀನಿವಾಸ ಗೌಡ :– ದಯವಿಟ್ಟು ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಉತ್ತರಿಸಿ. ಅವರು ಕೇಳುವುದಿಷ್ಟು, ಆ ಕಂಪನಿಯಿಂದ ನಷ್ಟ ಆದಂತಹ ಹಣವನ್ನು ಕೊಡಿಸಬೇಕು. ಅಷ್ಟಕ್ಕೆ ಮಾತ್ರ ನೀವು ಉತ್ತರ ಕೊಡಿ. ನೀವು ಕೊಟ್ಟಿರುವ ಉತ್ತರವನ್ನು ನಾವೆಲ್ಲಾ ಓದಿಕೊಂಡಿದ್ದೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ನಾನು ಅದನ್ನೇನು ಪೂರಾ ಓದುವುದಿಲ್ಲ, ಅದರಲ್ಲಿ ಸ್ವಲ್ಪ ಮಾತ್ರವನ್ನೇ ನಾನು ಓದುತ್ತೇನೆ. ರಾಯಚೂರು, ಬಳ್ಳಾರಿ, ಗುಲ್ಬರ್ಗಾ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ Toatal ಭತ್ತ ಬಿತ್ತಿದಂತಹ area 1,41,247 ಹೆಕ್ಟೇರ್‌ಗಳಾಗಿವೆ. ಈ ಒಂದು ಹೈಬ್ರಿಡ್ ಭತ್ತದ ತಳಿ, 27 B 04, ಇದು 6,880 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಈಗಾಗಲೆ ನಮ್ಮ ಇಲಾಖೆ ಮತ್ತು ಯುನಿವರ್ಸಿಟಿ ತಜ್ಞರು, ಸನ್ಮಾನ್ಯ ಸದಸ್ಯರಾದ ಬೋಸರಾಜು ಮತ್ತು ರಾಜುಗೌಡರು ಫೋನ್ ಮಾಡಿದಾಗ ನಾವು ಯುನಿವರ್ಸಿಟಿಯಿಂದ ಅಲ್ಲಿಗೆ ಕಳುಹಿಸಿ ಸಾಕಷ್ಟು ವರದಿಗಳು ಇದರಲ್ಲಿ ಬಂದಿರುವುದನ್ನು ತಾವು ನೋಡಿದ್ದಿರಿ. ಹಿಂದೆ ಹಲವಾರು ಪ್ರಕರಣಗಳಲ್ಲಿ ಬಳ್ಳಾರಿಯಲ್ಲಿ ಕಳೆದ ವರ್ಷ ಮುಸುಕಿನ ಜೋಳದ್ದೊಂದು ಕೇಸ್ ಆಗಿತ್ತು. ಸುಮಾರು ರೂ. 27,50,663 ಕಂಪನ್ಸೇಷನ್ ನಲ್ಲಿ ಕಂಪನಿಯವರು ಆ ರೈತರಿಗೆ, ಪ್ರೊಡಕ್ಷನ್ ಕಡಿಮೆಯಾದರೆ, ಏನು ತಕರಾರು ಇತ್ತೋ ಆ ಹಿನ್ನೆಲೆಯಲ್ಲಿ ಸೆಟ್ಲ್ ಮಾಡಿದ್ದೇವೆ. ಇದರಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಯುನಿವರ್ಸಿಟಿಯಿಂದ ಅಂತಿಮ ವರದಿ ಬಂದ ತಕ್ಷಣ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಅದಕ್ಕೆ ಬೇಕಾದರೆ ಇಲ್ಲಿಂದ ನಮ್ಮ ಬೆಂಗಳೂರಿನ ಒಂದು ಟೀಂ ಅನ್ನು ಕೂಡಲೇ ರಾಯಚೂರು ಆ ಭಾಗಕ್ಕೆ ಕಳುಹಿಸಿ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್.ಎಸ್. ಬೋಸ್‌ರಾಜು :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅಧಿಕಾರಿಗಳು ಕೊಟ್ಟಿರುವ ವರದಿಯನ್ನು ಓದಿದ್ದಾರೆ. ಇನ್ನು ಬೆಳೆ ಪಕ್ವವಾಗಬೇಕಾದರೆ 30–40 ದಿವಸಗಳು ಬೇಕಾಗುತ್ತದೆಂದು ತಿಳಿಸಿದ್ದಾರೆಂದು ಹೇಳಿದ್ದಾರೆ. ಈಗಾಗಲೇ ನಿನ್ನೆ ಅಧಿಕಾರಿಗಳು ಹೋಗಿ

ಹತ್ತು ಬೈ ಹತ್ತರಲ್ಲಿ ಏನು ಬೆಳೆ ಪಕ್ವವಾಗಿದೆ, ಅದನ್ನು ಈಗಾಗಲೇ ಕೊಯ್ದು 5–10 ಕಿಲೋ ಬೆಳೆ ಬಂದಿರುವುದನ್ನು ರೆಕಾರ್ಡ್ ಮಾಡಿರುವ ಬಗ್ಗೆ ನನಗೆ ಕಾಪಿ ಬಂದಿದೆ. ಇವರು ಇಲ್ಲಿ ಹೇಳುವಾಗ ಇನ್ನು 30–40 ದಿವಸಗಳು ಬೇಕಾಗುತ್ತದೆಂದು ಹೇಳುತ್ತಾರೆ. ಯಾವ ರೀತಿಯಾಗಿ ಅಧಿಕಾರಿಗಳು ಕೊಟ್ಟಿರುವ ಮಾಹಿತಿಯಿಂದ ಜನರಿಗೆ ಮೋಸವಾಗುತ್ತದೆಂಬುದಕ್ಕೆ ಇದನ್ನು ಹೇಳುತ್ತಿದ್ದೇನೆ. ತಾವು ಕೆಳಗಿನ ಅಧಿಕಾರಿಗಳು ಕೊಟ್ಟಿರುವ ಮಾಹಿತಿಯನ್ನು ನೋಡಿಕೊಂಡು ಹೇಳುತ್ತೀರಿ. ಈಗಾಗಲೇ ಕೆನಾಲ್ ಬಂದಾಗಿದೆ. ಈ 17 ನೇ ತಾರೀಖು ಬಂದಾಗುವ ಕೆನಾಲ್‌ಗೆ ನಾವು ಈಶ್ವರಪ್ಪನವರ ಹತ್ತಿರ ಮನವಿ ಮಾಡಿ, ಯಡಿಯೂರಪ್ಪನವರ ಹತ್ತಿರ ಹೇಳಿದ ಮೇಲೆ ಭದ್ರಾದಿಂದ ಈ 31 ನೇ ತಾರೀಖಿನವರೆಗೆ ನೀರನ್ನು ಬಿಟ್ಟ ನಂತರ ನಮಗೆ ಒಂದಿಷ್ಟು ಬೆಳೆ ಬರತಕ್ಕಂಥ ಪರಿಸ್ಥಿತಿಯಲ್ಲಿದ್ದೇವೆ. ಈಗಾಗಲೇ ಬೆಳೆ ಪರಿಪಕ್ವವಾಗಿ ಹೊಲವನ್ನು ಕೊಯ್ಯುತ್ತಿದ್ದರೆ, ನಿನ್ನೇ ಅದೇ ಅಧಿಕಾರಿಗಳು ಬಂದು ಕೃಷಿ ಇಲಾಖೆಯವರನ್ನು ಮುಂದಿಟ್ಟುಕೊಂಡು, ಆ ರೈತರನ್ನು ಮುಂದಿಟ್ಟುಕೊಂಡು ಹತ್ತು ಬೈ ಹತ್ತರಲ್ಲಿ ಪರೀಕ್ಷೆ ಮಾಡುವ ಸಲುವಾಗಿ ನನ್ನ ಕ್ಷೇತ್ರದಲ್ಲಿ 8–10 ಜಾಗದಲ್ಲಿ ಈಗಾಗಲೇ ಕೊಯ್ದಿದ್ದಾರೆ, ಕೊಯ್ದು ಕಣ ಮಾಡಿ, ರೆಕಾರ್ಡ್ ಮಾಡಿ, ಸಹಿ ಮಾಡಿಸಿಕೊಂಡು ಹೋಗಿದ್ದಾರೆ. ಇಲ್ಲಿ ತಾವು, ಇನ್ನು 30–40 ದಿವಸಬೇಕೆಂದು ಉತ್ತರವನ್ನು ಕೊಡುತ್ತೀರಿ, ಇದು ಯಾವ ರೀತಿಯಾದ ಉತ್ತರ. ಅಲ್ಲಿ ಬೇಕಾಗಿರುವುದು 90–100 ದಿವಸದೊಳಗಾಗಿ ಬರುವ ಬೆಳೆ. 100 ದಿವಸ ಮುಗಿದು ಹೋಗಿದೆ, ಆದರೂ ಇನ್ನು 30–40 ದಿವಸ ಬೇಕೆಂದು ತಮ್ಮ ಇಲಾಖೆಯಿಂದ ಈ ರೀತಿಯಾದ ಉತ್ತರ ಬಂದರೆ, ಯಾವ ದಿಸೆಯಲ್ಲಿ ನಮ್ಮ ಕೃಷಿ ಇಲಾಖೆಯವರು ಕೆಲಸ ಮಾಡುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಬೇಕು. ಇದು ಬಹಳ ದಾರಿತಪ್ಪಿಸತಕ್ಕಂತಹ ಕೆಲಸ, ಇದು ಬಹಳ ಸೀರಿಯಸ್ ಇದೆ. ನಾವೆಲ್ಲರು ಸೇರಿ ರೈತರು ರೈತರೆಂದು ಮಾತನಾಡುತ್ತೇವೆ. ಈಗ ತಮ್ಮಿಂದ ಸರಿಯಾದ ಆಶ್ವಾಸನೆ ಸಿಗದಿದ್ದರೆ ಸಾಕಷ್ಟು ಮಂದಿ ಇವತ್ತು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಇದೆ, ಏಕೆಂದರೆ ಇಲ್ಲಿ 3–4 ಎಕರೆ ಇರುವ ಬಡ ರೈತರೆಲ್ಲಾ 12,000–15,000 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೆಲ್ಲಾ ವರದಿ ನಿಮಗೆ ಬಂದಿದೆ, ಯಾವ್ಯಾವ ರೈತರದ್ದು ಎಷ್ಟೆಷ್ಟು ಎಕರೆ, ಯಾವ ಸರ್ವೇ ನಂಬರ್ ಎಂಬ ಮಾಹಿತಿ ಸಹಿತ ನಮ್ಮ ಹತ್ತಿರವಿದೆ. ತಾವು ಇದಕ್ಕೆ ತಕ್ಷಣ ಸ್ಪಂದಿಸಿ ಮಾಡದಿದ್ದರೆ, ಈ ಉತ್ತರವೇ ಪತ್ರಿಕೆಗಳಿಗೆ ಹೋದರೆ ಸರ್ಕಾರ ಸುಳ್ಳು ಹೇಳುತ್ತಿದೆ ಎಂಬ ಒಂದು ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆ, ಹಾಗಾಗಿ ತಾವು ಸರಿಯಾದ ರೀತಿಯಲ್ಲಿ ಸ್ಪಂದಿಸಿ.

ಶ್ರೀ ಹಂಪನಗೌಡ ಬಾದರ್ಲಿ :– ಅದರೆ ಜೊತೆಗೆ ಕಾರಣವೇನು ಕೊಡುತ್ತಾರೆಂದರೆ, ನಾಟಿ ಮಾಡಿದ ಸಮಯದಲ್ಲಿದ್ದ ಉಷ್ಣಾಂಶದ ಬಗ್ಗೆ ವಿಶ್ಲೇಷಿಸಿ ಕಾರಣಗಳನ್ನು

ಕಂಡುಹಿಡಿಯಬಹುದು ಹಾಗೂ ಬೆಳೆಯು ಪಕ್ವವಾಗುವುದಕ್ಕೆ ಇನ್ನು 30–40 ದಿವಸಗಳು ಬೇಕಾಗುತ್ತದೆಂದು ತಿಳಿಸಿ ನಂತರ ಅಂತಿಮ ವರದಿಯನ್ನು ನೀಡಲಾಗುವುದೆಂದು ತಿಳಿಸುತ್ತಾರೆ. ಅಂದರೆ, ಇದು ದಾರಿತಪ್ಪಿಸತಕ್ಕಂತಹ ಕೆಲಸ, ರೈತರನ್ನು ವ್ಯವಸ್ಥಿತವಾಗಿ ಮೋಸ ಮಾಡುವ ರೀತಿಯಲ್ಲಿ ಉತ್ತರ ಬರುತ್ತಿದೆ. ದಯವಿಟ್ಟು ಈ ಬಗ್ಗೆ ಸಮಗ್ರ ತನಿಖೆಯಾಗಬೇಕು, ವಿಶ್ವವಿದ್ಯಾಲಯದ ಹಿರಿಯ ವಿಜ್ಞಾನಿಗಳನ್ನು ಕಳುಹಿಸಬೇಕು. ಕಳುಹಿಸಿ ಇದರ ಬಗ್ಗೆ ಸಮಗ್ರವಾದ ತನಿಖೆಯಾಗಿ ಆ ರೈತರಿಗೆ ಪರಿಹಾರ ಕೊಡಿಸಬೇಕು. ಈ ಉತ್ತರವನ್ನು ನೋಡಿದರೆ ದಾರಿ ತಪ್ಪಿಸತಕ್ಕಂತಹ ಕೆಲಸವಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದು ರೈತರ ಪ್ರಶ್ನೆ, ತಾವು ಕೂಡ ರೈತರ ಮಕ್ಕಳು. ಇಲ್ಲಿ ನೀಡಿರುವ ಉತ್ತರವನ್ನು ನೋಡಿ, ಈಗ ಸಲ್ಲಿಸಲಾಗಿರುವ ಮಾಹಿತಿಯು ಪ್ರಾಥಮಿಕ ವರದಿಯಾಗಿದ್ದು, ಅಂತಿಮ ವರದಿಯನ್ನು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳಿಂದ ನಿರೀಕ್ಷಿಸಲಾಗಿದೆ, ಇನ್ನು ಅಂತಿಮ ವರದಿ ಕೃಷಿ ವಿಜ್ಞಾನಿಗಳಿಂದ ಬರಬೇಕು. ಕೃಷಿ ವಿಜ್ಞಾನಿಗಳಿಂದ ವರದಿ ಬಂದ ನಂತರ ಮುಂದಿನ ಕ್ರಮವನ್ನು ಕೈಗೊಳ್ಳುವವರಿದ್ದಾರೆ. ಆ ಎಲ್ಲಾ ಪೀಕ್ ಆದ ಮೇಲೆ ಏನು ಕ್ರಮ ತೆಗೆದುಕೊಳ್ಳುವುದು? ಹಿಂದೆ ಒಮ್ಮೆ ನಮ್ಮ ಗದಗಿನಲ್ಲೇ ಈ ಕ್ರಾಪ್‌ಗೆ ಇನ್ಶುರೆನ್ಸ್ ಕಟ್ಟಿದ್ದಿಲ್ಲ ಸುಳ್ಳು ಬರೆದು ಕಳುಹಿಸಿಬಿಡುತ್ತಿದ್ದರು. ಅದು ಇಲ್ಲಿ ನಡೆಯುತ್ತಿದೆ. ಅದಕ್ಕೆ ತಾವು ಕೂಡಲೇ ಈ ಬಗ್ಗೆ 2–3 ದಿವಸಗಳ ವರದಿಯನ್ನು ತರಿಸಿ, ಉತ್ತರವನ್ನು ಎಂದು ಹೇಳುತ್ತಿರೆಂಬುದನ್ನು ಹೇಳಬೇಕು, ಮತ್ತೆ ಇದನ್ನು ಇಲ್ಲಿಗೆ ಮುಗಿಸುವುದು ಬೇಡ, ಇದು ರೈತರ ಪ್ರಶ್ನೆ, ಬಹಳ ಸಮಸ್ಯೆ ಇದೆ.

ಶ್ರೀ ಹಂಪನಗೌಡ ಬಾದರ್ಲಿ :– ಇದರ ಜೊತೆಗೆ, ಇವತ್ತು ಆ ಸಂಬಂಧಪಟ್ಟ ಕಂಪನಿಗಳಿಂದ ಐದು ಬೈ ಐದು ಪ್ರತಿ ಫೀಲ್ಡ್‌ಗೆ ಹೋಗಿ ಆ ಬೆಳೆಯನ್ನು ಕಟಾವು ಮಾಡಿ ಸೀಜ್ ಮಾಡುತ್ತಿದ್ದಾರೆ. ಬರೀ ಕಂಪನಿಯವರು ಮಾತ್ರ ಹೋಗುತ್ತಿದ್ದಾರೆ, ಜಂಟಿಯಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಏತಕ್ಕೆ ಹೋಗುತ್ತಿಲ್ಲ, ಕಾರಣವೇನು? ಇದನ್ನು ಜಂಟಿಯಾಗಿ ನಡೆಸಬೇಕು. ಒಂದು ಕಡೆ ಕೃಷಿ ಇಲಾಖೆ ಇನ್ನೊಂದು ಕಡೆ ಕಂಪನಿಯವರು ಜಂಟಿಯಾಗಿ ಹೋಗಬೇಕು.

ಶ್ರೀ ಎನ್.ಎಸ್. ಬೋಸರಾಜು :– ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ, ಇಲ್ಲಿ ತಾವು (ಮಂತ್ರಿಗಳು) ಸಬ್ಸಿಡಿ ಮೇಲೆ ಕೊಟ್ಟಿರುವ ಸೀಡ್ ಅಲ್ಲವೆಂದು ಹೇಳಿದರೆ, ಇದು ತಮಗೆ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ರಾಜ್ಯದಲ್ಲಿ ಯಾವುದೇ ಸೀಡ್ಸ್ ಮಾರಾಟ ಮಾಡುವ ಸಂದರ್ಭದಲ್ಲಿ, ಅದು ತಮ್ಮ ಇಲಾಖೆಯ ಕಂಟ್ರೋಲ್‌ನಲ್ಲಿ ಬರುತ್ತದೆ. ಅವರ ಸರ್ಟಿಫೈಸೀಡ್ಸ್, ನಂಬರ್, ಬ್ಯಾಚ್ ಮತ್ತೆ ಸೀಡ್ಸ್, ಪೆಸ್ಟಿಸೈಡ್ ಮಾರುವಂತಹವರಿಗೆ ತಾವೇನು ಲೈಸೆನ್ಸ್ ಕೊಡುತ್ತೀರಿ, ಅವೆಲ್ಲವೂ

ನಿಮ್ಮ ಕಂಟ್ರೋಲ್‌ನಲ್ಲಾಗುತ್ತವೆ. ಹಾಗಾಗಿ ಸಬ್ಸಿಡಿ ಮಾಡಲಿ ಮತ್ತೊಂದು ಮಾಡಲಿ, ನನಗೂ ಆ ಕಾನೂನು ಗೊತ್ತಿದೆ, ಎಲ್ಲಾ ಇವರ ಇಲಾಖೆಯ ಕಂಟ್ರೋಲ್‌ಗೆ ಬರುತ್ತದೆ, ಏಕೆ ಬರುವುದಿಲ್ಲ. ಅವರು ಫರ್ಟಿಲೈಸರ್ ಒಂದೇ ಮಾರಿದ್ದಾರೆ ಸೀಡ್ಸ್ ಮಾರಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :– ಸ್ಟೇಟ್ ಏಜೆನ್ಸಿನಲ್ಲಿ ಸೀಡ್ಸ್ ಸರ್ಟಿಫಿಕೇಟ್ ಏಜೆನ್ಸಿ ಇದೆ, ಏಜೆನ್ಸಿ ಅದನ್ನು ಮಾಡಿ ಸರ್ಟಿಫೈ ಮಾಡಬಹುದು. ಇಲ್ಲಿ ಇವರು ತೆಗೆದುಕೊಂಡಂತಹ ಬೀಜ ಟ್ರೂತ್‌ಫುಲ್, ಅಂದರೆ ನಂಬಿಕೆ ಇರುವ ಬಿತ್ತನೆ ಬೀಜ, ಬ್ಯಾಚ್ ನಂಬರ್ ಇದ್ದರೆ ಸರ್ಟಿಫೈ ಸೀಡ್. ಹಾಗಾಗಿ ಆ ರಾಜ್ಯದ ಸರ್ಟಿಫೈ ಸೀಡ್ ಇದಾಗಿದ್ದರೆ, ಆ ಕಂಪನಿಯಿಂದ ನಾವು ಈಗಾಗಲೇ ಹಾವೇರಿನಲ್ಲಿ ದುಡ್ಡನ್ನು ಕೊಡಿಸಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ :– TL ಸೀಡ್, ಟ್ರುತ್‌ಫುಲ್ ಸೀಡ್.

ಶ್ರೀ ಕೆ. ಶ್ರೀನಿವಾಸಗೌಡ :– ಅದನ್ನೇ ನಾನು ಹೇಳುತ್ತಿರುವುದು, ಸರ್ಟಿಫೈ ಟ್ರುತ್ ಫುಲ್ ಸೀಡ್‌ಗೆ ಸಂಬಂಧಿಸಿದಂತೆ Act ನಲ್ಲಿ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರವಿಲ್ಲ, ಕೇಂದ್ರ ಸರ್ಕಾರಕ್ಕೆ ಬರುತ್ತದೆ. ನಾನು ಮಂತ್ರಿಯಾಗಿದ್ದಾಗ ಕೂಡ ಅನೇಕ ಸಾರಿ ನಾನೇ ಹೋಗಿ ಕೇಂದ್ರ ಕೃಷಿ ಮಂತ್ರಿ ಶರದ್ ಪವಾರ್ ಹತ್ತಿರ ಹೋಗಿ "ನೀವು ಈ Act ಅನ್ನು ಪರಿವರ್ತನೆ ಮಾಡಬೇಕು, ಇಲ್ಲದಿದ್ದರೆ ನೀವು ಇದನ್ನು ಅಲ್ಲಿ ಇಟ್ಟುಕೊಂಡಿದ್ದರೆ ಆಗುವುದಿಲ್ಲ, ರಾಜ್ಯಗಳಿಗೆ ಅಧಿಕಾರ ಬರಬೇಕು, ಆಗ ಇದರ ಮೇಲೆ ಕಂಟ್ರೋಲ್ ತರಬಹುದು" ಎಂದು ಕೂಡ ನಾನು ಅವರನ್ನು ಖುದ್ದಾಗಿ ಸಂಪರ್ಕಿಸಿ ಚರ್ಚೆ ಮಾಡಿ ಬಂದಿದ್ದೇನೆ. ಅದು ಒಂದು ತೊಂದರೆಯಾದರೂ ಕೂಡ Pioneer ಅಂತಹ ಒಳ್ಳೆಯ ಕಂಪನಿಗಳು, ಈ ರೀತಿಯಾದರೆ ಅವರ ಮೇಲೆ ಕ್ರಮ ಜರುಗಿಸುವುದಕ್ಕೆ ಅವಕಾಶವಿದೆ. ರೈತರಿಗೆ ನಷ್ಟವಾಗಿದ್ದರೆ ಹಣ ಕೊಡಿಸುವ ಅಗತ್ಯವಿದೆ, ಅದನ್ನು ಮಾನ್ಯ ಮಂತ್ರಿಗಳು ಮಾಡಿ. ಮತ್ತೇ ಕೃಷಿ ವಿಶ್ವವಿದ್ಯಾಲಯದವರಿಂದ ಆದಷ್ಟು ಬೇಗ ವರದಿಯನ್ನು ತರಿಸಿಕೊಳ್ಳಿ. ಅವರು 30–40 ದಿವಸಗಳಾದ ಮೇಲೆ ಹೋಗುತ್ತೇವೆಂದರೆ, ಕೊಯ್ದಾದ ಮೇಲೆ ಬೆಳೆಯೇ ಇರುವುದಿಲ್ಲ, ಹಾಗಾಗಿ ಅವುಗಳ ಬಗ್ಗೆ ಆದ್ಯತೆಗಳನ್ನು ಕೊಡಿ.

ಶ್ರೀ ಬಂಡೆಪ್ಪ ಕಾಶಂಪೂರ್ :– ಸನ್ಮಾನ್ಯ ಅಧ್ಯಕ್ಷರೆ, TL seeds, truthful seeds, ರಿಯಾಯತಿ ದರದಲ್ಲಿ ಬಿತ್ತನೆ ಬೀಜ ಕೊಟ್ಟಿದ್ದಲ್ಲ, ಇದು Pioneer ಕಂಪನಿಯ ತಳಿ. ಯುನಿವರ್ಸಿಟಿಯಿಂದ ಯಾವ್ಯಾವ ರೀತಿ ಮಾಡಬೇಕು ಆ ರೀತಿ ನಮ್ಮ ಯುನಿವರ್ಸಿಟಿಯ ತಜ್ಞರೆಲ್ಲಾ ಹೋಗಿ ನಮಗೆ ವರದಿಯನ್ನು ಕೊಟ್ಟಿದ್ದಾರೆ. ತಾವು ಹೇಳುವಂತೆ ಕೂಡಲೇ ಬೆಂಗಳೂರಿನಿಂದ ಅಧಿಕಾರಿಗಳು ಮತ್ತು ಯುನಿವರ್ಸಿಟಿಯವರು, ಆಮೇಲೆ ನಮ್ಮ ಜಂಟಿ ನಿರ್ದೇಶಕರುಗಳು, ನೀವು ಎಲ್ಲರೂ ಸೇರಿ ನಾಳೆ ಅಧಿವೇಶನ ಮುಗಿದ ನಂತರ ನಾಳಿದ್ದು ಬೆಳಿಗ್ಗೆ ಎಲ್ಲಾ ಟೀಂ ಅನ್ನು ಅಲ್ಲಿಗೆ ಕಳುಹಿಸುತ್ತೇನೆ. ಎರಡನೆಯದಾಗಿ ಈಗ ಮಾಜಿ

ಸಚಿವರು ಹೇಳಿದ್ದು ನಿಜ. ಬೀಜ ಕಾಯಿದೆ, ಅದು ಕೇಂದ್ರ ಸರ್ಕಾರದ್ದಾಗಿದೆ. ಹಲವಾರು ಬದಲಾವಣೆಗಳಾಗಬೇಕಾಗಿದೆ. ಹಿಂದಿನ ದಿವಸಗಳಲ್ಲಿ ನಮ್ಮ ರಾಜ್ಯ ಸರ್ಕಾರದಿಂದ ಹಲವಾರು ಶಿಫಾರಸ್ಸುಗಳು ಹೋಗಿದ್ದಾವೆ. ಹಾಗಾಗಿ ಮುಂದಿನ ದಿವಸಗಳಲ್ಲಿ ಕಟ್ಟುನಿಟ್ಟಾಗಿ Pioneer ಕಂಪನಿ ಇರಲಿ, ಬೇರೆ ಯಾವುದೇ ಕಂಪನಿ ಇರಲಿ, ಕಳಪೆ ಗುಣಮಟ್ಟದ ಬೀಜಗಳನ್ನು ಮಾರಾಟ ಮಾಡಿದರೆ ನಮ್ಮ ಕೈಯಲ್ಲೇನಿದೆ ಎಂದರೆ maximum ಅವರನ್ನು black list ಮಾಡಿ ಮುಂದಿನ ದಿವಸಗಳಲ್ಲಿ ಅವರು ಬೀಜಗಳನ್ನು ಮಾರಾಟ ಮಾಡದಂತೆ ಮಾಡುವುದು. ಆದರೆ ಅದನ್ನು ಬಿಟ್ಟು ಹಿಂದಿನ ದಿವಸಗಳಿಂದ ಆ ಕಂಪನಿಯ representative ಅನ್ನು ನಮ್ಮ ಅಧಿಕಾರಿಗಳನ್ನು ಕೂರಿಸಿ ಈ ರೀತಿ ಸಮಸ್ಯೆಗಳು ಬಂದಾಗ ಅದರದ್ದೇ ಆ ವಿಧಿ ವಿಧಾನದಲ್ಲಿ ಪರಿಹಾರ ಕೊಡುವ ಪ್ರಯತ್ನಗಳು ಆಗಿದೆ. ಮೊನ್ನೆಯೋ ಅದನ್ನು ಮಾಡಿದ್ದೇವೆ. ನಾಡಿದ್ದು ಕಂಪನಿಯವರೂ ಅಲ್ಲಿಗೆ ಬರುತ್ತಾರೆ. ವಾಸ್ತವಿಕವಾಗಿ ಅಲ್ಲಿ ಏನಾಗಿದೆ ಎಂಬುದನ್ನು ತಿಳಿಯುವ ಬಗ್ಗೆ ಅಲ್ಲಿನ ಡೆಪ್ಯೂಟಿ ಕಮಿಷನರ್‌ರವರೊಂದಿಗೆ, ಯಾವ ರೀತಿಯಾಗಿ ಬಳ್ಳಾರಿಯಲ್ಲಿ ಹಲವಾರು ಸಭೆಗಳು ನಡೆದಿತ್ತು ಅದೇ ರೀತಿ ಸಭೆ ಮಾಡಿ ಈ ರೀತಿ ಏನಾದರೂ ಸಮಸ್ಯೆ ನಿಜಕ್ಕೂ ಕಂಡುಬಂದಿದ್ದರೆ ಆ ಕಂಪನಿಯ ಮೇಲೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಲು ಬಯಸುತ್ತೇನೆ.

ಶ್ರೀ ಎನ್. ಎಸ್. ಬೋಸರಾಜ್ :– ಈಗ ಆಗಿರುವ ವಿಷಯಕ್ಕೆ ಸಂಬಂಧಿಸದಂತೆ ತಕ್ಷಣ ಪರಿಹಾರ ಕೊಡಿಸುವ ಒತ್ತಾಯ ಇಲಾಖೆಯ ಮೂಲಕ ಆಗಬೇಕಾಗುತ್ತದೆ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ಸರ್ಕಾರ ಅವರಿಗೆ ಬ್ಲಾಕ್ ಲಿಸ್ಟ್ ಮಾಡಬಹುದು. ಆ ಕೆಲಸವನ್ನು ಮಾಡುತ್ತೇವೆ. ಅನಂತರ ತಾವೂ ಹಾಗೂ ಅವರೆಲ್ಲರೂ ಕುಳಿತುಕೊಂಡು, ಎಷ್ಟೋ ಕಡೆ consumer court ಮೂಲಕ ರೈತರು ಹೋಗಿದ್ದನ್ನು ನೋಡಿದ್ದೇವೆ. ಆ ಕಂಪನಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿರುವ ಉದಾಹರಣೆಗಳಿವೆ. ಅಕಸ್ಮಾತ್ ಆ ಕಂಪನಿಯ ಬೀಜ ಕಳಪೆ ಎಂದು ಬಂದಾಗ ಆ ಕಂಪನಿಯ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಹಿಂದುಮುಂದು ನೋಡುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :– ಅವರಿಗೆ ನೋಟೀಸ್ ಕೊಡಿ. ಅವರಿಗೆ ಯಾವಾಗ ನೋಟೀಸ್ ಕೊಡುತ್ತೇವೋ ಆಗ ಅವರು ಸರ್ಕಾರವನ್ನು ಅಪ್ರೋಚ್ ಮಾಡುತ್ತಾರೆ. ನಮ್ಮ ಶಾಸಕರನ್ನು ಕರೆಸಿ ಅವರೆಲ್ಲಾ ಕುಳಿತುಕೊಂಡು ಪರಿಹಾರ ಇಷ್ಟು ಕೊಡಬೇಕು ಎಂಬ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಲಿ. ಅವೆಲ್ಲಾ ದೊಡ್ಡ ದೊಡ್ಡ international companies. ಅವರಿಗೆ 10–15 ಕೋಟಿ ಕೊಡಲು ತೊಂದರೆ ಯಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ಆ ಭಾಗದ ಶಾಸಕರನ್ನು ಕರೆಸಿ ಕಂಪನಿಯವರನ್ನೂ ಕರೆಸಿ ಚರ್ಚೆ ಮಾಡಿ ಇಷ್ಟು ಪರಿಹಾರ ಕೊಡಬೇಕೆಂದು ತೀರ್ಮಾನ

ಮಾಡಲಿ. ನೀವು ಈಗಲೇ ಅವರಿಗೆ ನೋಟೀಸ್‌ನ್ನು ಕೊಡಬೇಕು. ನಾಳೆ ಬ್ಲಾಕ್‌ಲಿಸ್ಟ್ ಮಾಡುತ್ತೇವೆ, ಏನೇನು ಪ್ರೊಸೀಜರ್ ಇದೆ ಅದನ್ನೆಲ್ಲಾ ಕೊಟ್ಟು ಅವರಿಗೆ ಮೊದಲು ನೋಟೀಸ್‌ನ್ನು ಕೊಡಿ. ಆಗ ಅವರು ನಿಮ್ಮ ಹತ್ತಿರ ಬರುತ್ತಾರೆ. ಮುಂದೆ ಅವರು ಯಾವುದೇ ಬೀಜವನ್ನು ಈ ರಾಜ್ಯದಲ್ಲಿ ಮಾರಾಟ ಮಾಡಬಾರದು ಎಂಬ ಕಂಡೀಷನ್‌ನ್ನು ಹಾಕಬೇಕಾಗುತ್ತದೆ. ನಾನು ಹಿಂದೆ ಈ ರೀತಿ ಮಾಡಿದ್ದೆ. ಆ ದಿಕ್ಕಿನಲ್ಲಿ ಮಾಡಿದರೆ ಅವರು ನಿಮ್ಮ ಹತ್ತಿರ ಬರುತ್ತಾರೆ. ಆಗ ನಮ್ಮ ಜನಪ್ರತಿನಿಧಿಗಳನ್ನು ಕರೆಸಿ ಕುಳಿತು ಚರ್ಚೆ ಮಾಡಿ ಪರಿಹಾರ ಕೊಡಿಸಲು ಅವಕಾಶವಿದೆ. ಆ ನೋಟೀಸ್‌ನ್ನು ಕೊಡಲು ನಾಳೆಯೇ ಪ್ರವೃತ್ತರಾಗಿ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ಆ ಕಂಪನಿಯವರು even field visit ಗೆ ಹೋಗುತ್ತಾರೆಂಬುದು ಅವರ ಗಮನಕ್ಕೆ ಬಹಳಷ್ಟು ಬಂದಿದೆಯೆಂದು ನನಗನ್ನಿಸುತ್ತದೆ. ಆದ್ದರಿಂದ ಅಲ್ಲಿಗೆ ನಮ್ಮ ಉನ್ನತ ಮಟ್ಟದ ಟೀಮ್‌ನ್ನು ಕಳುಹಿಸಿ ವರದಿಯನ್ನು ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಛೇರ್ಮನ್ :– ಚರ್ಚೆ ಮುಕ್ತಾಯವಾಗಿದೆ. ಈ ಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವುದು.

(ಸದನವು ರಾತ್ರಿ 8 ಗಂಟೆ 24 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 5 ನೇ ಮಾರ್ಚ್ ಮಾಹೆ 2007 ರ ಗುರುವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ–1

2024 (2199) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವುದೇ ಏರೋನಾಟಿಕಲ್ ಇಂಜಿನಿಯರಿಂಗ್ ಅಂಡ್ ಟ್ರೈನಿಂಗ್ ಸ್ಕೂಲ್‌ನ್ನು ಕರ್ನಾಟಕ ಸರ್ಕಾರವು ನಡೆಸುತ್ತಿದೆಯೇ;

ಆ) ಇನ್ನು ಹೆಚ್ಚಿನ ಏರೋನಾಟಿಕಲ್ ಇಂಜಿನಿಯರಿಂಗ್ ಅಂಡ್ ಟ್ರೈನಿಂಗ್ ಸ್ಕೂಲ್‌ನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದೆಯೇ; (ಉದ್ದೇಶಿತ ನಿವೇಶನ ಮತ್ತು ಸ್ಥಳದ ವಿವರಗಳನ್ನು ಒದಗಿಸುವುದು)

ಇ) ಇಲ್ಲದಿದ್ದಲ್ಲಿ, ಇದರಿಂದ ಅರ್ಹ ನಿರುದ್ಯೋಗಿ ಯುವಕರಿಗೆ ಕೆಲಸ ನೀಡುವಲ್ಲಿ ರಾಜ್ಯ ಸರ್ಕಾರದ ವರ್ಚಸ್ಸನ್ನು ಹೆಚ್ಚಿಸುವುದಿಲ್ಲವೇ;

ಈ) ಹಾಗಿದ್ದಲ್ಲಿ, ವಾಣಿಜ್ಯ ಮತ್ತು ಖಾಸಗಿ ವಿಮಾನಯಾನ ಸಂಸ್ಥೆಗಳಲ್ಲಿನ ತಾಂತ್ರಿಕ ಮತ್ತು ಓವರ್‌ಬೋರ್ಡ್ ಸಿಬ್ಬಂದಿಗಳಿಗಾಗಿ ಶಾಲೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?